ಅದರೊಳಗಿದ್ದದ್ದನ್ನು ಮುಷ್ಟಿ, ಮುಷ್ಟಿ ಹಿಡಿದು ಅವನ ಕಡೆ ಎಸೆಯಲು ಶುರು ಮಾಡಿದಳು.

ಪೇದೆ ಅವಳು ಮುಂದುವರಿಸುವುದನ್ನು ತಡೆದ. ಕೂಡಲೇ ಇನ್ನಿಬ್ಬರು ಓಡಿ ಬಂದು ಸೂಟ್‌ಕೇಸ್ ಎಳೆದು ಪಕ್ಕಕ್ಕೆ ಕರೆದುಕೊಂಡು ಹೋದರು. ಗಲಿಬಿಲಿಯ ಸೂಚನೆ ತಿಳಿದು ಇನ್‌ಸ್ಪೆಕ್ಟರ್ ಹೊರಗೆ ಬಂದ. ಆತನಿಗೆ ತಕ್ಷಣವೇ ಅವಳನ್ನು ಮಾತನಾಡಿಸುವುದಕ್ಕೆ ಮನಸ್ಸಾಗಲಿಲ್ಲ. ಪೇದೆಗಳು ಅವಳನ್ನು ಬೆಂಚಿನ ಮೇಲೆ ಕೂಡಿಸಿದರು. ಜೊತೆಗೆ ಭಯಗೊಂಡು ನಿಂತ ನಾಗೇಂದ್ರನನ್ನು ಕೂಡ.

ಇನ್‌ಸ್ಪೆಕ್ಟರ್ ಸೆಲ್‌ನಲ್ಲಿದ್ದ ಬಾಲಾಜಿ ಮತ್ತು ಅಲ್ಲಿ ಬಿದ್ದಿದ್ದ ವಸ್ತುಗಳನ್ನು ನೋಡಿ ದಂಗಾದ. ತಕ್ಷಣಕ್ಕೆ ಏನೊಂದೂ ಹೊಳೆಯದೆ ನಿಗೂಢವೆನಿಸಿ ಅವನ್ನೆಲ್ಲ ಸೇರಿಸಿ ಗಂಟು ಕಟ್ಟಿಡುವುದಕ್ಕೆ ಹೇಳಿದ.

ಅಷ್ಟು ದೂರ ಸರಸೂ ಕುಳಿತಿದ್ದಲ್ಲಿಗೆ ಬಂದು 'ಏನಿದೆಲ್ಲ?' ಎಂದ. ಅವಳು ಸುಮ್ಮನಿದ್ದಳು. ಅವನಿಗೆ ಕುತೂಹಲ ಒತ್ತಾಯಿಸಿತು.

'ಅವ್ನ ಹತ್ರ ಮಾತಾಡಿದ್ರಾ' ಎಂದು ಮೃದುವಾಗಿ ಕೇಳಿದ.

ಅವಳು ಅದಕ್ಕೂ ಸುಮ್ಮನಿದ್ದಳು.

ಇನ್‌ಸ್ಪೆಕ್ಟರ್ ನಾಗೇಂದ್ರನ ಕಡೆ ನೋಡಿದ.

'ಅವನು ಇವರ ಮಗ.'

ಇನ್‌ಸ್ಪೆಕ್ಟರ್ ಕೇಳಿಸಿಕೊಂಡದ್ದನ್ನು ನಂಬದವನಂತೆ ಅವಳ ಕಡೆ ಕತ್ತು ತಿರುಗಿಸಿ ನೋಡಿದ. ಅವಳು ಯಾವ ಕಡೆಗೂ ನೋಡದಂತೆ ದೃಷ್ಟಿ ಮಾಡಿದ್ದಳು.

ಇನ್‌ಸ್ಪೆಕ್ಟರ್‌ಗೆ ಏನೂ ಮಾತನಾಡಲಾಲಿಲ್ಲ. ಸುಮ್ಮನೆ ಅವಳ ಎರಡು ಕೈಗಳನ್ನು ಒಮ್ಮೆ ಮೆಲ್ಲನೊತ್ತಿ ಹೊರಟ.

ಅನಂತರ ಸರಸೂ, ನಾಗೇಂದ್ರ ಅಂಗಳದ ಬೆಂಚಿನ ಮೇಲೆ ಕುಳಿತರು. ಇನ್ನಷ್ಟು ಸಮಯ ಕಳೆಯಿತು. ಪೇದೆಯೊಬ್ಬ ಮೈಸೂರ್‌ಪಾಕ್ ತುಂಡುಗಳನ್ನು ತಂದು ಕಾಂಪೌಂಡಿನಾಚೆ ಅಷ್ಟು ದೂರಕ್ಕೆ ಎಸೆದ. ಅತ್ತಿತ್ತ ಓಡಾಡುತ್ತಿದ್ದ ನಾಯಿಗಳು ಓಡಿ ಬಂದು ಕಚ್ಚಿಕೊಂಡು ಹೋದವು.

ಕೆಲವು ಕ್ಷಣಗಳ ನಂತರ ನಾಗೇಂದ್ರ ಕೊಂಚ ಪಕ್ಕಕ್ಕೆ ಜರುಗಿ, ಬಾಗಿ, ಸರಸೂ ತೊಡೆಯ ಮೇಲೆ ತಲೆಯಿಟ್ಟ. ಅವಳು ಗೋಡೆಗೆ ತಲೆಯಾನಿಸಿ, ಅವನ ತಲೆಯ ಮೇಲೆ ಮೃದುವಾಗಿ ಅಂಗೈ ಇಟ್ಟಳು.

## ಎ.ಎನ್. ಪ್ರಸನ್ನ

ಲೇಖಕರು ಎಂಜಿನಿಯರಿಂಗ್ ಪದವೀಧರ. ಕೆ.ಪಿ.ಟಿ.ಸಿ.ಎಲ್.ನಲ್ಲಿ ಸೇವೆ ಸಲ್ಲಿಸಿ ನಿವೃತ್ತರು. ಸಾಹಿತ್ಯ, ನಾಟಕ ಮತ್ತು ದೃಶ್ಯಮಾಧ್ಯಮದಲ್ಲಿ ಆಸಕ್ತಿ. 'ಉಳಿದವರು', 'ರಥಸಪ್ತಮಿ' ಸೇರಿದಂತೆ ನಾಲ್ಕು ಕಥಾಸಂಕಲನಗಳು ಪ್ರಕಟವಾಗಿವೆ. 'ಮೂರನೆ ದಡ', 'ನೂರು ವರ್ಷದ ಏಕಾಂತ', 'ಒಂದಾನೊಂದು ಕಾಲದಲ್ಲಿ' ಅವರ ಅನುವಾದಿತ ಪುಸ್ತಕಗಳು. 'ಚಿತ್ರಕಥೆ', 'ಚಿತ್ರಪ್ರಪಂಚ'— ಅಂತರರಾಷ್ಟ್ರೀಯ ಚಲನಚಿತ್ರಗಳ ವಿಶ್ಲೇಷಣಾತ್ಮಕ ಲೇಖನಗಳ ಕೃತಿಗಳಾಗಿವೆ. ದೂರದರ್ಶನ ಧಾರಾವಾಹಿ 'ಸಂಬಂಧಗಳು', ಟೆಲಿಫಿಲ್ಮ್ 'ಅಪ್ಪಮಗ' ನಿರ್ದೇಶಿಸಿದ್ದಾರೆ. ಅವರ ನಿರ್ದೇಶನದ ಸಿನಿಮಾ – 'ಹಾರು ಹಕ್ಕಿಯನೇರಿ'.